**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 6296 /2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ರಾಮಲಿಂಗಯ್ಯ | **ಚಾ.ಸಾ.-9** |
| **ತಂದೆಯ ಹೆಸರು** | - | ಚಿಕ್ಕೋನು | **ಪ್ರಾ.ಸಾ.-9** |
| **ವಯಸ್ಸು** | - | 59 ವರ್ಷ | |
| **ಉದ್ಯೋಗ** | - | ವ್ಯವಸಾಯ | |
| **ವಾಸಸ್ಥಳಃ** | - | ನಗರಕೆರೆ | |

ದಿನಾಂಕಃ 07.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ. 7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 7 ಬಿ ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ ಸುಮಾರು 2 ವರ್ಷಗಳ ಹಿಂದೆ ಗಲಾಟೆಯಾದ ಸ್ಥಳದಲ್ಲಿ ಪೋಲೀಸರು ಮಹಜರ್ ಗೆ ಬಂದಿದ್ದಾಗ ನಾನು ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ನಿ.ಪಿ. 7 ದಾಖಲೆಗೆ ನನ್ನನ್ನು ಹೊರತುಪಡಿಸಿ ಚಾ,ಸಾ. 10 ರವರು ಸಹಿ ಮಾಡಿರುತ್ತಾರೆ. ಸದರೀ ಮಹಜರ್ ನ್ನು ಸಂಜೆ 04.00 ರಿಂದ 05.00 ಗಂಟೆಯ ತನಕ ಜರುಗಿಸಿರುತ್ತಾರೆ. ಘಟನಾ ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿರುತ್ತೇನೆ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿನಾಂಕಃ 16.01.2021 ರಂದು ನಗರಕೆರೆ ಗ್ರಾಮದ ಹಳೇ ಸ್ಕೂಲಿನ ಪಶ್ಚಿಮ ದಿಕ್ಕಿನ ರಸ್ತೆಯಲ್ಲಿ ಚಾ.ಸಾ. 3 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಸಂಜೆ 05.15 ರಿಂದ, 06.00 ಗಂಟೆಯವರೆಗೆ ನಿ.ಪಿ. 7 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಶ್ರೀ ಎಂ ಕೆ ಜೆ ರವರಿಂದ.</u>**

ಮಹಜರ್ ಗೆ ಬರುವಂತೆ ಪೋಲೀಸರು ನಿಮಗೆ ನೋಟೀಸ್ ನೀಡಿದ್ದರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಗಲಾಟೆ ನಡೆಯಿತೆನ್ನಲಾದ ದಿನ ನಾನು ಊರಿನಲ್ಲಿಯೇ ಇದ್ದೆ. ಘಟನಾ ಸ್ಥಳಕ್ಕೂ ಮತ್ತು ನಮ್ಮ ಮನೆಗೂ ಸುಮಾರು 50 ಅಡಿ ಅಂತರವಿದೆ. ಪೋಲೀಸರು ಮಹಜರ್ ಗೆ ಬಂದ ಸಂದರ್ಭದಲ್ಲಿ ನಾನು ಅಂಗಡಿಯ ಬಳಿ ಇದ್ದೆ. ಆ ಸಮಯದಲ್ಲಿ ಅಂಗಡಿಯ ಬಳಿ ಸುಮಾರು 5-6 ಜನ ಇದ್ದರು. ಗಲಾಟೆಯನ್ನು ನಾನು ನೋಡಿರುತ್ತೇನೆ. ನಾನು ಗಲಾಟೆಯನ್ನು ನೋಡಿದ್ದೇನೆಂದು, ಪೋಲೀಸರಿಗೆ ತಿಳಿಸಿರುತ್ತೇನೆ. ನಗರಕೆರೆ ಗ್ರಾಮದ ಹಳೇ ಸ್ಕೂಲಿನ ಪಶ್ಚಿಮ ದಿಕ್ಕಿನಲ್ಲಿ ರಸ್ತೆ ಇದೆಯೆಂದು ತೋರಿಸಲು ನಮ್ಮ ಬಳಿ ದಾಖಲೆ ಇದೆ. ಸದರೀ ದಾಖಲೆಯನ್ನು ನಾನು ಪೋಲೀಸರಿಗೆ ನೀಡಿಲ್ಲ. ಘಟನಾ ಸ್ಥಳದಲ್ಲಿ ಯಾವುದೇ ರಸ್ತೆ ಇಲ್ಲ ಎಂದು ಪಂಚಾಯತಿಯವರು ಆರೋಪಿ 1 ರವರಿಗೆ ಹಿಂಬರಹ ನೀಡಿದ್ದಾರೆಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಎರಡು ಗುಂಪುಗಳು ಇವೆ. ನಿಮ್ಮ ಊರಿನಲ್ಲಿ ರಾಜಕೀಯವಾಗಿ ಎರಡು ಗುಂಪುಗಳು ಇರುವ ಕಾರಣ ಹಬ್ಬ ಹರಿದಿನಗಳ ಸಮಯದಲ್ಲಿ ಗಲಾಟೆಗಳಾಗುತ್ತವೆಯೆಂದು ಬಂದೋ ಬಸ್ತಿಗಾಗಿ ಪೋಲೀಸರನ್ನು ನಿಯೋಜನೆ ಮಾಡುತ್ತಾರೆಂದರೆ ಸರಿ.

ಆರೋಪಿತರು, ಒಂದು ರಾಜಕೀಯ ಪಕ್ಷದ ಮುಖಂಡರು, ನೀವು ಇನ್ನೊಂದು ರಾಜಕೀಯ ಪಕ್ಷದ ಮುಖಂಡರು ಎಂದರೆ ಸರಿ. ನೀವು ಆರೋಪಿತರ ಮೇಲಿನ ರಾಜಕೀಯ ಜಿದ್ದಿಗಾಗಿ ಘಟನಾ ಸ್ಥಳದಲ್ಲಿ ಯಾವುದೇ ರಸ್ತೆ ಇಲ್ಲದೇ ಇದ್ದರೂ ಕೂಡ, ರಸ್ತೆ ಇದೆಯೆಂದು ಹೇಳಿ ಇ ಓ ರವರಿಗೆ ಸುಳ್ಳು ನಿವೇದನೆಯನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ರಾಜಕೀಯ ಪ್ರಭಾವದಿಂದ ಚಾ.ಸಾ. 1 ರವರು ಘಟನಾ ಸ್ಥಳದಲ್ಲಿ ಯಾವುದೇ ರಸ್ತೆ ಇಲ್ಲದೇ ಇದ್ದರೂ ಕೂಡ ಅದನ್ನು ತೆರವು ಮಾಡಲು ಹೋದಾಗ ಆರೋಪಿತರು ಸದರೀ ಜಾಗ ನಮ್ಮದು ಎಂದು ಹೇಳಿ ಗಲಾಟೆ ಮಾಡಿರುತ್ತಾರೆಂದು ಸುಳ್ಳು ದೂರನ್ನು ನೀಡಿದ್ದಾರೆಂದರೆ ಸರಿಯಲ್ಲ. ಸುಮಾರು 2 ವರ್ಷಗಳ ಹಿಂದೆ ಪೋಲೀಸರು ಮಹಜರ್ ಕ್ರಮ ಜರುಗಿಸಲು, ನಗರಕೆರೆ ಗ್ರಾಮಕ್ಕೆ ಬಂದಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಮ್ಮ ಜೊತೆ ಚಾ.ಸಾ. 10 ರವರು ಇದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಪೋಲೀಸರು ಮಹಜರ್ ಕ್ರಮ ಜರುಗಿಸಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲೀಸರು ರಾಜಕೀಯ ಪ್ರಭಾವದಿಂದ ದಾಖಲು ಮಾಡಿರುವ ಸುಳ್ಳು ದೂರಿಗೆ ಪೂರಕವಾಗುವಂತೆ ಸುಳ್ಳು ಮಹಜರ್ ನ್ನು

ಠಾಣೆಯಲ್ಲಿಯೇ ಸೃಷ್ಟಿ ಮಾಡಿ, ಅದಕೆ ನಿಮ್ಮ ಸಹಿಯನ್ನು ಪಡೆದಿದ್ದಾರೆಂದರೆ ಸರಿಯಲ್ಲ. ನೀವು ಆ ದಿನ ಸ್ಥಳದಲ್ಲಿಲ್ಲದೇ ಇದ್ದರೂ ಕೂಡ ಸ್ಥಳದಲ್ಲಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.